# ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಎಸ್.ಎಲ್. ಭೋಜೇಗೌಡ ಇವರು ನಿಯಮ-72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಉತ್ತರ.

**ವಿಷಯ:** ಬಿಜಾಪುರ ಜಿಲ್ಲೆ, ದೇವರ ಹಿಪ್ಪರಗಿ ತಾಲ್ಲೂಕು, ಕೊಂಡುಗುಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ನಾಗರಾಳಡೋಣ್ ಗ್ರಾಮದಲ್ಲಿ ಸರ್ಕಾರವು ಬಡ ಜನರಿಗೆ ವಸತಿ ಯೋಜನೆಯಡಿ ಸರ್ಕಾರಿ ನಿವೇಶನವನ್ನು ನೀಡಿರುತ್ತದೆ. ಸದರಿ ನಿವೇಶನಗಳ ಮಾಲೀಕತ್ವಕ್ಕೆ ಸಂಬಂಧಪಟ್ಟಂತೆ ಗ್ರಾಮ ಪಂಚಾಯಿತಿ ಕಚೇರಿಯ ನಮೂನೆ-9 ರ ಪುಸ್ತಕದಲ್ಲಿ ನಮೂದು ಮಾಡಲಾಗಿರುತ್ತದೆ. ಈತ್ತೀಚೆಗೆ ಕೆಲವು ಬಲಾಢ್ಯರು, ಹಾಗೂ ಕೆಲವು ಗ್ರಾಮ ಪಂಚಾಯಿತಿಯ ಸಿಬ್ಬಂದಿ ವರ್ಗದವರು ಶಾಮೀಲಾಗಿ ನಮೂನೆ-9 ಪುಸ್ತಕದಲ್ಲಿ ಈಗಾಗಲೇ ನಮೂದು ಮಾಡಲಾಗಿದ್ದ ನಿವೇಶನದ ನಂಬರ್ ಮತ್ತು ನಿವೇಶನ ಮಾಲೀಕರ ಹೆಸರುಗಳನ್ನು ತಿದ್ದಿ ಹಾಗೂ ನಮೂನೆ-9 ರ ಮೂಲ ಪುಸ್ತಕವನ್ನು 2 ಪುಸ್ತಕಗಳನ್ನಾಗಿ ಮಾಡಿಕೊಂಡು ಮನಸ್ಸಿಗೆ ಬಂದಂತೆ ಖಾತೆಗಳನ್ನು ಬೇಕಾದವರ ಹೆಸರಿಗೆ ಬದಲಾಯಿಸುತ್ತಾ, ಜನರಿಗೆ ತೊಂದರೆ ಕೊಡುತ್ತಿದ್ದಾರೆ, ಇದರಿಂದ ಗ್ರಾಮದಲ್ಲಿ ಗಲಾಟೆಗಳು ನಡೆಯುತ್ತಿದ್ದು, ಅಶಾಂತಿ ಉಂಟಾಗಿರುತ್ತದೆ.

ಆದ್ದರಿಂದ ಇದಕ್ಕೆ ಕಾರಣಕರ್ತರಾದ ಪಂಚಾಯಿತಿ ಸಿಬ್ಬಂದಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವುದರೊಂದಿಗೆ ನಮೂನೆ-9 ರ 2 ಪುಸ್ತಕಗಳನ್ನು ಪರಿಶೀಲಿಸಿ, ನಿಜವಾದ ಮಾಲೀಕರ ಹೆಸರುಗಳನ್ನು ಸರಿಯಾದ ಕ್ರಮದಲ್ಲಿ ನಮೂದಿಸುವುದರೊಂದಿಗೆ ಗ್ರಾಮದ ಜನತೆಗೆ ನ್ಯಾಯ ಒದಗಿಸುವ ಬಗ್ಗೆ.

**ಉತ್ತರ:** ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ವಿಜಯಪುರ ಜಿಲ್ಲಾ ಪಂಚಾಯತಿ ರವರ ದಿನಾಂಕ:21-02-2024 ರ ವರದಿಯನ್ವಯ ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿ ತಾಲ್ಲೂಕಿನ ಕೊಂಡಗೂಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ನಾಗರಾಳಡೋಣ ಗ್ರಾಮದ ನಮೂನೆ-9 ರ ಎರಡು ಪುಸ್ತಕಗಳನ್ನು ನಿರ್ವಹಿಸಿ ಆಸ್ತಿಗಳನ್ನು ತಪ್ಪಾಗಿ ದಾಖಲಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದು, ಈ ಬಗ್ಗೆ ಸಂಬಂಧಿಸಿದ ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಹಾಗೂ ತಪ್ಪಾಗಿ ಅಥವಾ ತಿದ್ದಿರುವ ಅಂಶಗಳನ್ನು ಸರಿಪಡಿಸಲು ಕ್ರಮ ವಹಿಸಲಾಗುವುದು.

ಸಂಖ್ಯೆ:RDPR 140 GPA 2024

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.